ಪ್ರಾರ್ಥನೆಯು ಬೆಳಗಿನ ಬೀಗದಕೈ ಮತ್ತು ಸಂಜೆಯ ಚಿಲಕ. ಪ್ರಾರ್ಥನೆಯು ನನ್ನ ಜೀವನವನ್ನು ಉಳಿಸಿದೆ. ಅದಿಲ್ಲದಿದ್ದರೆ ನಾನೆಂದೋ ಹುಚ್ಚನಾಗುತ್ತಿದ್ದೆ. —ಮಹಾತ್ಮಾ ಗಾಂಧೀಜಿ

ಪ್ರಾರ್ಥನೆಯು ಪಕ್ಷಿಯ ದೇಹವಿದ್ದಂತೆ, ಬಯಕೆಗಳು ಅದರ ರೆಕ್ಕೆಗಳು. —ಜೆರೆಮಿ ಟೈಲರ್

ಶ್ರೀರಾಮಕೃಷ್ಣರ ಚಿತ್ರದ ಮುಂದೆ ಮಗುವಿನಂತೆ ಕಣ್ಣೀರು ಸುರಿಸುತ್ತ ಎಡೆಬಿಡದೆ ಪ್ರಾರ್ಥಿಸಬೇಕು. ಈ ರೀತಿ ನೀವು ಪ್ರಾರ್ಥಿಸುತ್ತ ಹೋದರೆ ಅವನ ಅನುಗ್ರಹ ನಿಮ್ಮ ಮೇಲಾಗುತ್ತದೆ.

—ಸ್ವಾಮಿ ಶಿವಾನಂದ.

ಸ್ವರ್ಗವೆಂದೂ ಕಿವುಡಾಗಿಲ್ಲ, ಆದರೆ ಮಾನವನ ಹೃದಯ ಮೂಕವಾಗಿರುವುದು.

—ಕ್ವಾರ್ಲೆಸ್ (Quarles)

ಶ್ರದ್ಧೆಯಿಂದ ಪ್ರಾರ್ಥಿಸಿ ತಾಳ್ಮೆಯಿಂದ ಕಾಯುತ್ತಿದ್ದರೆ, ಅಂಥ ಪ್ರಾರ್ಥನೆ ಕೃತಜ್ಞತಾಭಾವದಲ್ಲಿಯೂ, ವಿಜಯೋತ್ಸಾಹದಲ್ಲಿಯೂ ಸ್ತುತಿಯಲ್ಲಿಯೂ ಕೊನೆಗೊಳ್ಳುತ್ತದೆ.—ಎ. ಮ್ಯಾಕ್ಲೆರೇನ್ (A.Maclaren)

ನನ್ನ ಪ್ರಾರ್ಥನೆಗಳೆಲ್ಲವೂ ಈಡೇರದೇ ಇದ್ದುದಕ್ಕಾಗಿ ನಾನು ಭಗವಂತನಿಗೆ ಕೃತಜ್ಞನಾಗಿದ್ದೇನೆ.

—ಜೀನ್ ಇಂಜೆಲೊ (Jean Ingelow).

ಅತ್ಯಂತ ಶ್ರೇಷ್ಠ ಪ್ರಾರ್ಥನೆಯೇ ತಾಳ್ಮೆ—ಬುದ್ಧ.

ಪ್ರಾರ್ಥನೆಯೆಂಬ ರೆಕ್ಕೆಗಳ ಮೂಲಕ ಆತ್ಮವು ಸ್ವರ್ಗದೆಡೆಗೆ ಹಾರುತ್ತದೆ ಮತ್ತು ಧ್ಯಾನವೆಂಬ ಕಣ್ಣಿನಿಂದ ದೇವರನ್ನು ನೋಡುತ್ತದೆ.

—ಆ್ಯಂಬ್ರೋಸ್ (Ambrose)

ಪ್ರಾರ್ಥನೆಯಲ್ಲಿ ಹೃದಯವಿಲ್ಲದೆ ಶಬ್ದಗಳಿರುವುದಕ್ಕಿಂತ, ಶಬ್ದಗಳಿಲ್ಲದೆ ಹೃದಯವಿರುವುದು ಒಳ್ಳೆಯದು. —ಬನ್ಯನ್ (Bunyan)

ದೇವರು ಹೇಳುವುದನ್ನು ಕಿವಿಗೊಟ್ಟು ಕೇಳಿ, ಅವನು ನಿಮಗೆ ಯಾವುದು ಶಾಂತಿಯನ್ನು ನೀಡುತ್ತದೊ ಅದರ ಬಗ್ಗೆ ತಿಳಿಸುತ್ತಾನೆ. —ಥಾಮಸ್ ಎ. ಕೆಂಪಿಸ್.

ನನ್ನ ಶಕ್ತಿಯೆಲ್ಲ ಕೇವಲ ಪ್ರಾರ್ಥನೆ ಹಾಗೂ ತ್ಯಾಗದ ಮೇಲೆ ನಿಂತಿದೆ. ಇವು ನನ್ನ ಅಜೇಯ ಅಸ್ತ್ರಗಳು. ಹೃದಯವನ್ನು ಗೆಲ್ಲಲು ಪದಗಳಿಂತ ಈ ಅಸ್ತ್ರಗಳೇ ಹೆಚ್ಚು ಉಪಯುಕ್ತ ಎನ್ನುವುದು ನನ್ನ ಅನುಭವ. —ಆ್ಯಂಬ್ರೋಸ್ (Ambrose).

ನಿದ್ರಿಸುವುದಕ್ಕೆ ಮುಂಚೆ ಮತ್ತು ನಿದ್ರೆಯಿಂದ ಎದ್ದ ಕೂಡಲೇ ಪ್ರಾರ್ಥನೆಯಲ್ಲಿ ತೊಡಗುವವರು ನಿಜವಾಗಿಯೂ ಸುಖಿಗಳು. —ಸಂತ ಥೆರೇಸಾ



ಸ್ವಾಮಿ ವಿವೇಕಾನಂದ ವಿರಚಿತ
"ಅಂಬಾಸ್ತೋತ್ರ"

ಕಾ ತ್ವಂ ಶುಭೇ ಶಿವಕರೇ ಸುಖದುಃಖಹಸ್ತೇ
ಆಘೂರ್ಣಿತಂ ಭವಜಲಂ ಪ್ರಬಲೋರ್ಮಿಭಂಗೈಃ ।
ಶಾಂತಿಂ ವಿಧಾತುಮಿಹ ಕಿಂ ಬಹುಧಾ ವಿಭಗ್ನಾಂ
ಮಾತಃಪ್ರಯತ್ನಪರಮಾಽಸಿ ಸದೈವ ವಿಶ್ವೇ ॥ ೧ ॥

ಸುಖದುಃಖಗಳನ್ನು ತನ್ನ ಕೈಗಳೊಳಗೆ ಇಟ್ಟುಕೊಂಡಿರುವವಳೆ, (ದರ್ಶನ ಮಾತ್ರದಿಂದ) ಶಾಂತಿಸುಖವನ್ನು ಬೀರುತ್ತಿರುವ ಮಂಗಳಸ್ವರೂಪಿಣಿಯೆ, ನೀನಾರು? ಈ ವಿಶ್ವದಲ್ಲಿ ಸಂಸಾರಸಾಗರದ ನೀರು ಪ್ರಬಲವಾದ ಅಲೆಗಳ ಏರಿಳಿತಗಳಿಂದ ಕ್ಷೋಭೆಯನ್ನು ಹೊಂದಿ, ಸುಳಿಗಳಿಂದ ಕೂಡಿದೆ. ಎಲೈ ತಾಯಿ, ಈ ಭವಸಾಗರದಲ್ಲಿ ಅನೇಕ ವಿಧದಿಂದ ನಷ್ಟವಾದ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ನೀನು ಅನವರತವೂ ಅತ್ಯಂತವಾಗಿ ಪ್ರಯತ್ನಿಸುತ್ತಿರುವೆ!

ಸಂಪಾದಯಂತ್ಯವಿರತಂ ತ್ವವಿರಾಮವೃತ್ತಾ
ಯಾ ವೈ ಸ್ಥಿತಾ ಕೃತಫಲಂ ತ್ವಕೃತಸ್ಯ ನೇತ್ರೀ ।
ಸಾ ಮೇ ಭವತ್ವನುದಿನಂ ವರದಾ ಭವಾನೀ
ಜಾನಾಮ್ಯಹಂ ಧ್ರುವಮಿಯಂ ಧೃತಕರ್ಮಪಾಶಾ ॥ ೨ ॥

ಯಾವಳು ವಿರಾಮವಿಲ್ಲದೆ ದುಡಿಯುತ್ತ ಅನವರತವೂ ಜೀವಿಗಳಿಗೆ ಪ್ರಾರಬ್ಧ ಕರ್ಮಗಳ ಫಲವನ್ನು ನೀಡುತ್ತಲೂ, ವರ್ತಮಾನ ಭವಿಷ್ಯತ್ಕಾಲಗಳಲ್ಲಿ ಮಾಡತಕ್ಕ ಕರ್ಮಗಳಿಗೆ ಜೀವಿಗಳನ್ನು ಒಯ್ಯುತ್ತಲೂ ಇರುವಳೊ, ಆ ಭವಾನಿಯು ನನಗೆ ಅನುದಿನವೂ ಅಭೀಷ್ಟವನ್ನು ಅನುಗ್ರಹಿಸುವವಳಾಗಲಿ; ಅವಳೇ ಕರ್ಮಪಾಶವನ್ನು ಹಿಡಿದಿರುವಳೆಂದು ನಾನು ತಿಳಿದಿದ್ದೇನೆ; ಮತ್ತು ಇದು ಖಂಡಿತವಾದ ಮಾತು.

ಕಿಂ ವಾ ಕೃತಂ ಕಿಮಕೃತಂ ಕ್ವ ಕಪಾಲಲೇಖಃ
ಕಿಂ ಕರ್ಮ ವಾ ಫಲಮಿಹಾಸ್ತಿ ಹಿ ಯಾಂ ವಿನಾ ಭೋಃ ।
ಇಚ್ಛಾಪಾಶೈರ್ನಿಯಮಿತಾ ನಿಯಮಾಃ ಸ್ವತಂತ್ರೈಃ
ಯಸ್ಯಾಃ ಸದಾ ಭವತು ಸಾ ಶರಣಂ ಮಮಾದ್ಯಾ ॥ ೩ ॥

ಎಲೈ ಜೀವಿಗಳೆ, ಯಾವ ಧರ್ಮವು, ಯಾವ (ಜೀವಿಗಳ) ವರ್ತಮಾನ—ಭವಿಷ್ಯತ್ಕಾಲಗಳ ಕರ್ಮವು, ಯಾವ ಹಣೆಬರಹವು ಮತ್ತು ಯಾವ ಅದೃಷ್ಟ ಫಲವು ತಾನೆ ಆ ಭವಾನಿಯನ್ನು ಬಿಟ್ಟು ಇದೆ ? (ಅಂದರೆ ಸರ್ವವೂ ಅವಳ ಇಚ್ಛಾಧೀನ.) ಎಲ್ಲ ನಿಯಮಗಳೂ ಅವಳ ಸ್ವತಂತ್ರವಾದ ಇಚ್ಛಾಪಾಶಗಳಿಂದ ಕಟ್ಟಲ್ಪಟ್ಟಿವೆ. ಜಗತ್ತಿನ ಪ್ರಥಮಮಾರ್ಗದರ್ಶಿಕೆಯಾದ ಆ ಭವಾನಿಯು ನನಗೆ ರಕ್ಷಕಳಾಗಿರಲಿ.